# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಇತರೆ ಪರೀಕ್ಷೆಗಳು

## ಮಲ್ಲೇಶ್ವರಂ, 6ನೇ ಅಡ್ಡ ರಸ್ತೆ, ಬೆಂಗಳೂರು-3

ಸಂಖ್ಯೆ: ವೈ2(ಇ.ಪ)ಡೆ.ಖ.ಬ/16/2021-22. ದಿನಾಂಕ: 03.06.2022.

## ದರಪಟ್ಟಿ ಆಹ್ವಾನ ಪತ್ರ

**ವಿಷಯ:-** ಇತರೆ ಪರೀಕ್ಷೆಗಳ ವಿಭಾಗದ ಗಣಕ ಶಾಖೆಗೆ DUAL DISPLAY DESKTOP ಖರೀದಿಸುವ ಸಂಬಂಧ ದರಪಟ್ಟಿಯನ್ನು ಆಹ್ವಾನಿಸುವ ಬಗ್ಗೆ.

*****

ಮೇಲಿನ ವಿಷಯಕ್ಕೆ ಸಂಬಂದಿಸಿದಂತೆ, ಇತರೆ ಪರೀಕ್ಷೆಗಳ ವಿಭಾಗದ ಗಣಕಶಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರೋಗ್ರಾಮರ್‌ಗಳು ತಮ್ಮ ಕಾರ್ಯಗಳನ್ನು ತ್ವರಿತವಾಗಿ ನಿರ್ವಹಿಸಲು ಹಾಗೂ ನಿರ್ವಹಿಸುತ್ತಿರುವ ಕಾರ್ಯಗಳನ್ನು ಒಂದೇ ಸಮಯದಲ್ಲಿ ವೀಕ್ಷಿಸಲು DUAL DISPLAY DESKTOP (01 CPU 02 MONITER)ನ್ನು ಖರೀದಿಸುವ ಅವಶ್ಯಕತೆ ಇರುತ್ತದೆ. ಈ ಸಂಬಂಧ ಅರ್ಹ ಸಂಸ್ಥೆಗಳಿಂದ ದರಪಟ್ಟಿ ಆಹ್ವಾನಿಸಲಾಗಿದೆ. ಸಂಸ್ಥೆಗಳು DUAL DISPLAY DESKTOP (01 CPU 02 MONITER)ಗೆ ತಗಲುವ ಮೊತ್ತಕ್ಕೆ ಜಿ.ಎಸ್.ಟಿ ಸೇರಿಸಿ ದರಪಟ್ಟಿಯನ್ನು ಮುಚ್ಚಿದ ಲಕೋಟೆಯಲ್ಲಿ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ದಿನಾಂಕ: 13-06-2022 ರಂದು ಸಂಜೆ 4 ಗಂಟೆಯೊಳಗೆ, ನಿರ್ದೇಶಕರು,(ಇತರೆ ಪರೀಕ್ಷೆಗಳು), ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು-03 ಈ ವಿಳಾಸಕ್ಕೆ ಮುದ್ದಾಂ/ಅಂಚೆ ಮೂಲಕ ತಲುಪಿಸಲು ತಿಳಿಸಿದೆ.

| SL NO | ITEMS | SPECIFICATION | Approximate quantity |
|---|---|---|---|
| 1 | DUAL DISPLAY DESKTOP | Dual(Extended) Display Desktop Computer Configuration<br>Processor: Intel Core i5 (10th Gen)<br>RAM: 16gb DDR4<br>Storage: 256gb NVMe M.2 SSD + 1TB HDD<br>Optical Drive: 8x DVD RW<br>Operating System: Windows 10 pro<br>Ports : 1 HDMI port, 2 D (Display port), 1 VGA port<br>(Desktop Must support Extended Display with dual monitors)<br>Monitor Configuration:<br>Display size: 22" or Above<br>Number of Monitor for Each CPU(Desktop) : 2 Monitors<br>Ports in Monitors: 1 HDMI port, 1 D(Display port), 1 VGA port<br><br>**WARRANTY:** 05 Years Onsite warranty. | **02 No's** |

**ಷರತ್ತುಗಳು:**

1. ಎಲ್ಲಾ ತೆರಿಗೆ ಸೇರಿದಂತೆ ದರಗಳನ್ನು ನಮೂದಿಸುವುದು ಒಟ್ಟಾರೆ ಅತಿ ಕಡಿಮೆ ದರ ನಮೂದಿಸುವ ಸಂಸ್ಥೆಯ ದರವನ್ನು ಮಾತ್ರ ಪರಿಗಣಿಸಲಾಗುವುದು.
2. ಸರಬರಾಜು ಮಾಡುವ DUAL DISPLAY DESKTOP (01 CPU 02 MONITER) ಉತ್ತಮ ಕಂಪನಿಯದ್ದಾಗಿರಬೇಕು. ಕಳಪೆ ಗುಣಮಟ್ಟದ್ದಾಗಿದ್ದಲ್ಲಿ ತಿರಸ್ಕರಿಸಲಾಗುವುದು ಮತ್ತು ಈ ಕಾರ್ಯಕ್ಕೆ ಮಂಡಳಿಯಿಂದ ಯಾವುದೇ ಮುಂಗಡ ನೀಡಲಾಗುವುದಿಲ್ಲ.
3. ಸಂಸ್ಥೆಗಳು ಈ ಕಾರ್ಯಕ್ಕೆ ಸೂಚಿಸುವ ದರಪಟ್ಟಿಗಳನ್ನು ಒಪ್ಪುವ, ತಿರಸ್ಕರಿಸುವ ಅಧಿಕಾರ ಮಾನ್ಯ ನಿರ್ದೇಶಕರು (ಇತರೆ ಪರೀಕ್ಷೆಗಳು) ರವರದ್ದಾಗಿರುತ್ತದೆ.
4. ಅತಿ ಕಡಿಮೆ ದರ ಸೂಚಿಸಿ ಆಯ್ಕೆಯಾಗುವ ಸಂಸ್ಥೆಗೆ ನೀಡಲಾಗುವ ಕಾರ್ಯದೇಶದಲ್ಲಿ ಸೂಚಿಸುವ ದಿನಾಂಕದೊಳಗೆ ಪೂರೈಸುವುದು. ವಿಳಂಬವಾದಲ್ಲಿ ದಿನಕ್ಕೆ ರೂ.250/- ರಂತೆ ದಂಡವನ್ನು ಬಿಲ್ಲಿನ ಮೊತ್ತದಲ್ಲಿ ಕಟಾಯಿಸಲಾಗುವುದು.

5. ದರಪಟ್ಟಿ ಲಕೋಟೆಯ ಮೇಲೆ ಕಡ್ಡಾಯವಾಗಿ **"DUAL DISPLAY DESKTOP (01 CPU 02 MONITER) ಖರೀದಿಗೆ ಸಂಬಂಧಿಸಿದ ದರಪಟ್ಟಿ"** ಎಂದು ನಮೂದಿಸುವುದು.
6. ಕಾರ್ಯಾದೇಶದಲ್ಲಿ ಸೂಚಿಸಲಾಗಿರುವ ಕೆಲಸವನ್ನು ಪೂರ್ಣಗೊಳಿಸಿದ ನಂತರ ಬಿಲ್ಲಿನ ಮೊತ್ತದಲ್ಲಿ 2% ಟಿ.ಡಿ.ಎಸ್ ಅನ್ನು ಕಟಾಯಿಸಿ ಉಳಿಕೆ ಮೊತ್ತವನ್ನು ಚೆಕ್ ಮೂಲಕ ಪಾವತಿಸಲಾಗುವುದು.
7. ಈ ಕಾರ್ಯದ ಸಂಬಂಧ ಯಾವುದೇ ಸಾಗಾಣಿಕೆ ವೆಚ್ಚವನ್ನು ಮಂಡಳಿವತಿಯಿಂದ ಪಾವತಿಸಲಾಗುವುದಿಲ್ಲ.
8. ದರಪಟ್ಟಿ ಸಲ್ಲಿಸುವ ಸಂಸ್ಥೆಯು ನಿಯಮಾನುಸಾರ ನೊಂದಣಿಯಾಗಿದ್ದು, ಎಸ್.ಜಿ.ಎಸ್.ಟಿ ಮತ್ತು ಸಿ.ಜಿ.ಎಸ್.ಟಿ ಸಂಖ್ಯೆ ಹೊಂದಿರಬೇಕು.

ನಿರ್ದೇಶಕರು
(ಇತರೆ ಪರೀಕ್ಷೆಗಳು)

ಪ್ರತಿ : ಕಚೇರಿಯ ಸೂಚನಾ ಫಲಕಕ್ಕೆ.